# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 536(617)

ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ(ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 13. 12. 2024.

ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಲೆನಾಡು ಭಾಗಕ್ಕೆ ಬರುವ ಜಿಲ್ಲೆಗಳು ಯಾವುವು; ಮತ್ತು ಸದರಿ ಭಾಗದ ಹವಾಗುಣಕ್ಕೆ ಒಗ್ಗುವಂತಹ ಕೃಷಿ ಬೆಳೆಗಳು ಯಾವುವು; | ಮಲೆನಾಡು ಭಾಗದಲ್ಲಿ ಚಿಕ್ಕಮಗಳೂರು, ಕೊಡಗು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳು ಬರುತ್ತವೆ. ಮಲೆನಾಡು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿರುವ ಪ್ರಮುಖ ಕೃಷಿ ಬೆಳೆಗಳು ಈ ಕೆಳಗಿನಂತಿವೆ.<br>1.ಭತ್ತ 2. ರಾಗಿ 3. ಮುಸುಕಿನಜೋಳ |
| (ಆ) | ಸದರಿ ಬೆಳೆಗಳನ್ನು ಬೆಳೆಯಲು ಸರ್ಕಾರದ ಉತ್ತೇಜನ ಕ್ರಮಗಳೇನು; | ಸದರಿ ಬೆಳೆಗಳನ್ನು ಬೆಳೆಯಲು ಸರ್ಕಾರದ ಉತ್ತೇಜನ ಕ್ರಮಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ. |
| (ಇ) | ಸದರಿ ಬೆಳೆಗಳನ್ನು ಬೆಳೆಯಲಾಗುತ್ತಿರುವ ಪ್ರದೇಶದ ವ್ಯಾಪ್ತಿ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಕೃಷಿ ಬೆಳೆಗಳನ್ನು ಬೆಳೆಯಲಾಗುತ್ತಿರುವ ಒಟ್ಟು ಪ್ರದೇಶ ತಾಲ್ಲೂಕುವಾರು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| (ಈ) | ಸದರಿ ಬೆಳೆಗಳಿಗೆ ಇರುವ ಪ್ರೋತ್ಸಾಹ ಧನವೇನು; | ಅಕ್ಕಿ, ರಾಗಿ ಮತ್ತು ಮುಸುಕಿನ ಜೋಳ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ನೂತನ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ ವಿತರಣೆ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಯಂತ್ರೋಪಕರಣಗಳ ವಿತರಣೆಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಸಿರಿಧಾನ್ಯಗಳ ಉತ್ಪಾದನೆಗೆ ರೂ.3000/- ಪ್ರೋತ್ಸಾಹ ಧನ ನೀಡಲಾಗುತ್ತದೆ. |

| | | |
|---|---|---|
| (ಉ) | ಮಣ್ಣು ಪರೀಕ್ಷಾ ಕೇಂದ್ರಗಳು ಎಲ್ಲೆಲ್ಲಿವೆ? | ಕೃಷಿ ಇಲಾಖೆಯ ಅಧೀನದಲ್ಲಿ ಮಲೆನಾಡು ಭಾಗದ ಎಲ್ಲಾ ಜಿಲ್ಲೆಗಳಲ್ಲಿ ಮಣ್ಣು ಪರೀಕ್ಷಾ ಕೇಂದ್ರಗಳು ಜಿಲ್ಲೆಗೆ ಒಂದರಂತೆ ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.<br>1 ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲೂಕು<br>ಮಣ್ಣು ಆರೋಗ್ಯ ಕೇಂದ್ರ,<br>ಜಂಟಿ ಕೃಷಿ ನಿರ್ದೇಶಕರ ಕಛೇರಿ.<br>ಜ್ಯೋತಿನಗರ. ಚಿಕ್ಕಮಗಳೂರು 577102<br>2 ಕೊಡಗು ಜಿಲ್ಲೆ ಸೋಮವಾರಪೇಟೆ ತಾಲೂಕು<br>ಮಣ್ಣು ಆರೋಗ್ಯ ಕೇಂದ್ರ, ಕೂಡಿಗೆ. ಕುಶಾಲ ನಗರ ಹೋಬಳಿ. ಸೋಮವಾರ ಪೇಟೆ ಕೊಡಗು 571233<br>3 ಹಾಸನ ಜಿಲ್ಲೆ ಹಾಸನ ತಾಲೂಕು<br>ಮಣ್ಣು ಆರೋಗ್ಯ ಕೇಂದ್ರ, ಬಿ.ಎಂ ರಸ್ತೆ.<br>ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಆವರಣ ಸಂತೆಪೇಟೆ. ಹಾಸನ 573201<br>4 ಶಿವಮೊಗ್ಗ ಜಿಲ್ಲೆ ಶಿವಮೊಗ್ಗ ತಾಲೂಕು<br>ಮಣ್ಣು ಆರೋಗ್ಯ ಕೇಂದ್ರ ,ಒ.ಟಿ ರಸ್ತೆ.<br>ಶಿವಮೊಗ್ಗ 577202 |

ಸಂಖ್ಯೆ:AGRI/326/ACT/2024

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

## LCQ-536(617)-ಅನುಬಂಧ-1

## ಮಲೆನಾಡು ಭಾಗಕ್ಕೆ ಬರುವ ಜಿಲ್ಲೆಗಳಲ್ಲಿ ಬೆಳೆಯನ್ನು ಬೆಳೆಯಲು ಉತ್ತೇಜಿಸಲು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

1. **ಬೀಜಗಳ ಪೂರೈಕೆ:** ಕೃಷಿ ಇಲಾಖೆಯ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ವಿವಿಧ ಕೃಷಿ ಬೆಳೆಗಳ (ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಕಡಲೆ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ) ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50ರವರೆಗೆ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರವರೆಗೆ ರಿಯಾಯಿತಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ. ಒಟ್ಟಾರೆ ಗರಿಷ್ಠ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ರಿಯಾಯಿತಿಯಲ್ಲಿ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿದೆ.

2. **ಕೃಷಿ ಯಾಂತ್ರೀಕರಣ:** ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕೆ ಅನುವು ಮಾಡಿಕೊಡಲು ಹಾಗೂ ಕೂಲಿ ಕಾರ್ಮಿಕರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು, ಈ ಯೋಜನೆಯಡಿ ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತದೆ ಹಾಗೂ 45 ಪಿ.ಟಿ.ಒ ಹೆಚ್.ಪಿ ವರೆಗಿನ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

3. **ಕೃಷಿ ಸಂಸ್ಕರಣೆ:** ಈ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು ಮತ್ತು ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.90ರಷ್ಟು ಹಾಗೂ ಸಣ್ಣ ಯಂತ್ರಚಾಲಿತ ಎಣ್ಣೆಗಾಣ ಘಟಕಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.75 ಹಾಗೂ ಪ.ಜಾ./ಪ.ಪಂ., ರೈತರಿಗೆ ಶೇ.90 ರಂತೆ ಎಲ್ಲಾ ವರ್ಗದ ರೈತರಿಗೆ ಗರಿಷ್ಠ ರೂ.1.00 ಲಕ್ಷಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ. ಟಾರ್ಪಾಲಿನ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರಷ್ಟು ಮತ್ತು ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.

4. **ಹೈಟೆಕ್ ಹಾರ್ವೆಸ್ಟರ್ ಹಬ್**- ಬೆಳೆ ಕಟಾವು ಪ್ರಕ್ರಿಯೆಯನ್ನು ನಿಗದಿತ ಸಮಯದಲ್ಲಿ ಕೈಗೊಳ್ಳಲು ಹಾಗು ಕಟಾವು ಸಮಯದಲ್ಲಿ ಬೆಳೆ ನಷ್ಟವನ್ನು ತಡೆಗಟ್ಟಲು ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಹಂತ ಹಂತವಾಗಿ ಸ್ಥಾಪಿಸಲು ರಾಜ್ಯದಲ್ಲಿ ಪ್ರಚಲಿತವಿರುವ ಕೃಷಿ ಯಂತ್ರಧಾರೆ ಕೇಂದ್ರಗಳು / ರೈತ ಉತ್ಪಾದಕ ಸಂಸ್ಥೆಗಳು / ಸೇವಾದಾರ ಸಂಸ್ಥೆಗಳು/ವೈಯಕ್ತಿಕ ಫಲಾನುಭವಿಗಳನ್ನು ಒಳಗೊಂಡಂತೆ ಅರ್ಹತೆಯಿರುವ ಸಂಸ್ಥೆಗಳನ್ನು / ವೈಯಕ್ತಿಕ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವಶ್ಯಕತೆಯಿರುವ ಪ್ರದೇಶಗಳಲ್ಲಿ Hi-Tech Harvester Hubs ಗಳನ್ನು ಸ್ಥಾಪಿಸಲಾಗುವುದು. ಸದರಿ ಕೇಂದ್ರಗಳಲ್ಲಿ ದಾಸ್ತಾನೀಕರಿಸುವ Hi-Tech ಕಟಾವು / ಒಕ್ಕಣೆ ಯಂತ್ರಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ರಂತೆ ಗರಿಷ್ಠ ರೂ.40.00 ಲಕ್ಷದವರೆಗೆ, ಪ.ಜ/ಪ.ಪಂ. ವರ್ಗದ ರೈತರಿಗೆ ಹಾಗೂ ಸಂಘ-ಸಂಸ್ಥೆಗಳಿಗೆ (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆ / FPO ಗಳನ್ನೊಳಗೊಂಡಂತೆ) ಶೇ.70 ರಂತೆ ಗರಿಷ್ಠ ರೂ.50.00 ಲಕ್ಷದವರೆಗೆ ಸಹಾಯಧನವನ್ನು

ಒದಗಿಸಲಾಗುತ್ತಿದೆ. ಪ್ರತಿ ಒಂದು ಹೈಟೆಕ್ ಹಾರ್ವೆಸ್ಟರ್ ಹಬ್ ಘಟಕಕ್ಕೆ ಗರಿಷ್ಠ ಮೊತ್ತ ರೂ.100.00 ಲಕ್ಷಗಳು ಮೀರದಂತೆ (ರೂ.5.00 ಲಕ್ಷಗಳ ಆಡಳಿತಾತ್ಮಕ ವೆಚ್ಚ ಒಳಗೊಂಡಂತೆ) ಸಹಾಯಧನವನ್ನು

ಒದಗಿಸಲಾಗುತ್ತಿದೆ. ಸದರಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ರೈತರಿಗೆ ಒದಗಿಸಲಾಗುತ್ತಿದೆ.

5. **ಸಸ್ಯ ಸಂರಕ್ಷಣೆ:** ರಾಜ್ಯದಲ್ಲಿ ಕೃಷಿ ಉತ್ತೇಜನಕ್ಕಾಗಿ ರೈತರುಗಳಿಗೆ ಅನುಕೂಲವಾಗುವಂತೆ ಎಲ್ಲಾ ವರ್ಗದ ರೈತರಿಗೆ ಶೇ.50ರ ಸಹಾಯಧನದಡಿ ಪ್ರತಿ ಹೆಕ್ಟೇರ್‌ಗೆ ರೂ.500/- ರಂತೆ ಗರಿಷ್ಠ 2 ಹೆ. ಗೆ ಸೀಮಿತಗೊಳಿಸಿ ಅನುದಾನದ ಲಭ್ಯತೆಗೆ ಅನುಗುಣವಾಗಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಪೀಡೆನಾಶಕ/ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಕಾರಕಗಳ ವಿತರಣೆ, ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಬಗ್ಗೆ ತರಬೇತಿಗಾಗಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ.

6. **ರೈತ ಸಿರಿ & ಸಾವಯವ ಕೃಷಿ:** ರೈತ ಸಿರಿ ಕಾರ್ಯಕ್ರಮದಡಿ ಸಿರಿಧಾನ್ಯಗಳ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಸಿರಿಧಾನ್ಯಗಳಾದ ನವಣೆ, ಹಾರಕ, ಕೊರಲೆ, ಸಾಮೆ, ಊದಲು, ಬರಗು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಪ್ರೋತ್ಸಾಹಧನವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲಾಗುತ್ತದೆ.

   ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಯಂತ್ರೋಪಕರಣಗಳಿಗೆ ಒಟ್ಟು ಯಂತ್ರೋಪಕರಣಗಳ ವೆಚ್ಚದ ಮೇಲೆ ಶೇ.50 ರಷ್ಟು ಅಥವಾ ಗರಿಷ್ಠ ರೂ.10.00 ಲಕ್ಷಗಳವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ.

7. **ಸಾವಯವ ಇಂಗಾಲ ಅಭಿಯಾನ:** ರಾಜ್ಯದಲ್ಲಿ ಸಾವಯವ ಕೃಷಿ ಉತ್ತೇಜನಕ್ಕಾಗಿ ರೈತರುಗಳಿಗೆ ಅನುಕೂಲವಾಗುವಂತೆ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಉಪಯುಕ್ತತೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವ ಸಲುವಾಗಿ ರೈತರ ಜಮೀನಿನಲ್ಲಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲು ಫಲಾನುಭವಿ ರೈತರಿಗೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.2500/- ಸಹಾಯಧನ ನೀಡಲಾಗುತ್ತಿದೆ ಹಾಗೂ ಹಸಿರೆಲೆ ಗೊಬ್ಬರ ಬಳಕೆಯನ್ನು ಪ್ರೋತ್ಸಾಹಿಸಲು ಎಲ್ಲಾ ವರ್ಗದ ರೈತರಿಗೆ ಶೇ.75ರ ರಿಯಾಯಿತಿ ದರದಲ್ಲಿ ಪ್ರಮುಖವಾಗಿ ಡಯಾಂಚಾ ಮತ್ತು ಸನ್ಹೆಂಪ್ ಹಸಿರೆಲೆ ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ.

8. **ಹೊಸ ಬೆಳೆ ವಿಮಾ ಯೋಜನೆ:** ಈ ಯೋಜನೆಯಡಿ ಪ್ರವಾಹ, ಅನಾವೃಷ್ಟಿ, ಅಕಾಲಿಕ ಮಳೆ ಮತ್ತು ಇತರೆ ನೈಸರ್ಗಿಕ ವಿಕೋಪಗಳಿಂದ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುತ್ತದೆ. ಸದರಿ ಯೋಜನೆಯಡಿ ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಲು ರೈತರು ಆಹಾರ ಮತ್ತು ಎಣ್ಣೆಕಾಳು ಬೆಳೆಗಳಿಗೆ ಮುಂಗಾರು ಹಂಗಾಮಿನಲ್ಲಿ ಶೇ. 2.00 ರಷ್ಟು, ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಶೇ. 1.5 ರಷ್ಟು ಮತ್ತು ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ ಶೇ. 5.00 ರಷ್ಟು ಪ್ರೀಮಿಯಂ ಮೊತ್ತವನ್ನು ಮಾತ್ರ ಪಾವತಿಸಬೇಕಾಗಿರುತ್ತದೆ ಹಾಗೂ ಎಲ್ಲಾ ವರ್ಗದ ರೈತರಿಗೆ ಪ್ರೀಮಿಯಂ ಮೊತ್ತವು ಸಮವಾಗಿರುತ್ತದೆ.

   ಒಟ್ಟು ವಾಣಿಜ್ಯ ವಿಮಾ ಕಂತಿನ ದರದಲ್ಲಿ ಎಲ್ಲಾ ವರ್ಗದ ರೈತರ ಪ್ರೀಮಿಯಂ ಮೊತ್ತವನ್ನು ಹೊರತುಪಡಿಸಿ ಉಳಿದ ಪ್ರೀಮಿಯಂ ಅನ್ನು ಪ್ರೀಮಿಯಂ ಸಬ್ಸಿಡಿಯಾಗಿ ರೈತರ ಪರವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿಮಾ ಸಂಸ್ಥೆಯವರಿಗೆ ನೀಡಲಾಗುತ್ತಿದೆ.

ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ನೀರು ಒದಗಿಸುವ ಪೈಪುಗಳು ಹಾಗೂ ಕೃಷಿ ಉಪಕರಣಗಳನ್ನು ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೆ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ದ್ವಿದಳಧಾನ್ಯ ಬೆಳೆಗಳಿಗೆ ಪ್ರತಿ ಕ್ವಿಂಟಾಲಿಗೆ ರೂ.5000/- ಮತ್ತು ನ್ಯೂಟ್ರಿಸಿರಿಧಾನ್ಯಗಳಿಗೆ ರೂ.3000/- ಪ್ರೋತ್ಸಾಹ ಧನ ನೀಡಲಾಗುತ್ತಿದೆ

13. **ಕೃಷಿ ಯಾಂತ್ರೀಕರಣ ಉಪ ಅಭಿಯಾನ (Sub Mission on Agriculture Mechanisation-SMAM):** ರಾಜ್ಯದಲ್ಲಿ ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕೃಷಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಲು, ಹೆಚ್ಚಿನ ಇಳುವರಿ ಪಡೆಯಲು ನೆರವಾಗುವಂತೆ ಸಹಕಾರಿಯಾಗಲು ಹಾಗೂ ಕ್ಷೇತ್ರ ಶಕ್ತಿಯನ್ನು (ಪ್ರಸ್ತುತವಿರುವ 2.115 KW/ Ha to 2.5kW/Ha by 2023 and 4.00kW/ha by 2030) ಹೆಚ್ಚಿಸಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ರೈತರಿಗೆ ಟ್ರ್ಯಾಕ್ಟರ್(45HP ವರೆಗೆ), ಪವರ್ ಟಿಲ್ಲರ್ ಗಳ ಜೊತೆಗೆ ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಶಕ್ತಿ ಚಾಲಿತ ಅಂತರ ಬೇಸಾಯ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸೆಲ್ ಪಂಪ್‌ಸೆಟ್ ಗಳು ಇತ್ಯಾದಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ಹೀಗೆ ಉಳುಮೆಯಿಂದ ಕೊಯ್ಲಿನವರೆಗೆ ಹಾಗು ಕೊಯ್ಲು ನಂತರ ಉಪಯುಕ್ತವಾಗುವ ವಿವಿಧ ನಮೂನೆಯ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ.

14. **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿಯ ವಿಸ್ತರಣೆ ಹಾಗೂ ಜನಪ್ರಿಯಗೊಳಿಸುವ ಕಾರ್ಯಕ್ರಮ (RKVY-IFS):** ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ತೋಟಗಾರಿಕೆ ಹಾಗೂ ಪಶುಸಂಗೋಪನೆಗಳನ್ನು ಒಗ್ಗೂಡಿಸಿ "ಸಮಗ್ರ ಕೃಷಿ ಪದ್ಧತಿ "ಮೂಲಕ ರೈತನ ಆದಾಯ ಹೆಚ್ಚಳ ಮಾಡುವುದು ಹಾಗೂ ಅಳವಡಿಸಿದ ಪ್ರದೇಶದಲ್ಲಿ/ ಜಮೀನಿನಲ್ಲಿ ಬೆಳೆ ಉತ್ಪಾದಕತೆ, ಸುಸ್ಥಿರತೆ, ಸಮತೋಲನಾ ಆಹಾರ ಉತ್ಪಾದನೆ, ತಾಜ್ಯಗಳ ಮರುಬಳಕೆ ಹಾಗೂ ವರ್ಷಪೂರ್ತಿ ಆದಾಯ ಹೆಚ್ಚಿಸುವ ಉದ್ದೇಶದಿಂದ ಸಮಗ್ರ ಕೃಷಿ ಪದ್ಧತಿ ಮಾದರಿಗಳ ಅನುಷ್ಠಾನಕ್ಕೆ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ 2400 ಸಮಗ್ರ ಕೃಷಿ ಪದ್ಧತಿ ಮಾದರಿಗಳನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮವನ್ನು ರೂಪಿಸಿದ್ದು ಅದರಂತೆ ಅನುಷ್ಠಾನ ಮಾಡಲಾಗುತ್ತಿದೆ.

15. **ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು (NMEO-Oilseeds):** ಈ ಯೋಜನೆಯಡಿ ಎಣ್ಣೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸಲು ನೂತನ/ಸುಧಾರಿತ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಪೀಡೆನಾಶಕಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ, ಕೃಷಿ ಉಪಕರಣಗಳು ಹಾಗೂ ನೀರು ಒದಗಿಸುವ ಪೈಪುಗಳಿಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತದೆ. ಇದಲ್ಲದೇ, ದೃಢೀಕೃತ ಬಿತ್ತನೆ ಬೀಜದ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಪ್ರತಿ ಕ್ವಿಂಟಾಲ್ ಬಿತ್ತನೆ ಬೀಜೋತ್ಪಾದನೆಗೆ ರೂ.2500/-ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

16. **ಕೃಷಿ ವಿಸ್ತರಣೆ ಉಪ ಅಭಿಯಾನ (Sub Mission on Agriculture Extension-SMAE):** ವಿಸ್ತರಣಾ ಸುಧಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ ಯೋಜನೆಯು ವಿಸ್ತರಣಾ ಪದ್ಧತಿಯನ್ನು ರೈತರೇ ಮುನ್ನಡೆಸುವ ಹಾಗೂ ರೈತರಿಗೆ ಉತ್ತರದಾಯಿತ್ವವಾಗಬೇಕಾದ ಯೋಜನೆಯಾಗುವ ಗುರಿಯನ್ನು ಹೊಂದಿದೆ. ಭಾಗವಹಿಸುವಿಕೆ ಆಧಾರದ ಮೇಲೆ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ರೈತರಿಗೆ ತಂತ್ರಜ್ಞಾನವನ್ನು ಹೊಸ ಸಾಂಸ್ಥಿಕ ವ್ಯವಸ್ಥೆ

9. **ಕೃಷಿ ಭಾಗ್ಯ:** ಕೃಷಿ ಭಾಗ್ಯ ಯೋಜನೆಯನ್ನು ರಾಜ್ಯಾದ್ಯಂತ (ಎಲ್ಲ ಜಿಲ್ಲೆ/ತಾಲ್ಲೂಕುಗಳು) ವಿಸ್ತರಿಸಲಾಗಿದ್ದು, ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಸುಸ್ಥಿರ ಕೃಷಿಯನ್ನು ಉತ್ತೇಜಿಸಿ ಬೆಳೆ ಉತ್ಪಾದಕತೆ ಮತ್ತು ರೈತರ ಜೀವನ ಮಟ್ಟವನ್ನು ಸುಧಾರಿಸುವ ಮೂಲಕ ಬರ ಉಪಶಮನದ ಗುರಿ ಹೊಂದಿರುತ್ತದೆ. ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರ ಗೊಳಿಸುವುದು, ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ, ಬೆಳೆಗಳ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು ನಿರ್ಮಾಣ, ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ), ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing), ಹೊಂಡದಿಂದ ನೀರು ಎತ್ತಲು ಡೀಸೆಲ್/ಪೆಟ್ರೋಲ್/ಸೋಲಾರ್ ಪಂಪ್ ಸೆಟ್, ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ(ತುಂತುರು/ಹನಿ) ನೀರಾವರಿ ಘಟಕಗಳನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಡಿ ಎಲ್ಲಾ ಘಟಕಗಳಿಗೆ (ತಂತಿ ಬೇಲಿ ಹೊರತುಪಡಿಸಿ) ಸಾಮಾನ್ಯ ವರ್ಗದ ರೈತರಿಗೆ ಶೇ.80 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.90 ರಂತೆ ಸಹಾಯಧನವನ್ನು ಒದಗಿಸಲಾಗುತ್ತದೆ (ಷರಾ: ತಂತಿ ಬೇಲಿ ಘಟಕಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ.40 ಹಾಗೂ ಪ.ಜಾ./ಪ.ಪಂ. ರೈತರಿಗೆ ಶೇ.50 ರಂತೆ ಸಹಾಯಧನ).

10. **ಕೃಷಿ ನವೋದ್ಯಮ:** ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಹಾಗೂ ಗ್ರಾಮೀಣ ಭಾಗದ ಯುವಕರಿಗೆ ಉದ್ಯೋಗ ಸೃಜನೆಗಾಗಿ ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು ಹಾಗೂ ನವೀನ ಪರಿಕಲ್ಪನೆಗಳ ವಾಣಿಜ್ಯೀಕರಣವನ್ನು ಉತ್ತೇಜಿಸುವ ಗುರಿಯೊಂದಿಗೆ ಕೃಷಿ ನವ್ಯೋದ್ಯಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಯಡಿ ನವೋದ್ಯಮಗಳಿಗೆ ಯೋಜನಾ ವರದಿಯ ಶೇಕಡ 50 ರಷ್ಟು ಸಹಾಯಧನವನ್ನು ಬ್ಯಾಂಕ್ ಸಾಲದ ಮುಖಾಂತರ (Backended subsidy) ನೀಡಲಾಗಿದೆ.

11. **ಸೂಕ್ಷ್ಮ ನೀರಾವರಿ ಯೋಜನೆಯನ್ನು** ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅನುಷ್ಠಾನ ಮಾಡಲಾಗುತ್ತಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅನುಷ್ಠಾನಕ್ಕೆ ತೋಟಗಾರಿಕೆ ಇಲಾಖೆಯು ನೋಡಲ್ ಇಲಾಖೆಯಾಗಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಸಣ್ಣ / ಅತಿ ಸಣ್ಣ ರೈತರಿಗೆ ಶೇ.55 ಮತ್ತು ಇತರೇ ವರ್ಗದ ರೈತರಿಗೆ ಶೇ.45 ರಷ್ಟು ಸಹಾಯಧನವನ್ನು ಪ್ರತಿಯೊಬ್ಬ ರೈತರಿಗೆ ಗರಿಷ್ಠ 5.0 ಹೆಕ್ಟೇರ್ ಪ್ರದೇಶದವರೆಗೆ ನೀಡಲು ಅವಕಾಶವಿರುತ್ತದೆ. ರಾಜ್ಯದಲ್ಲಿ, ರಾಜ್ಯ ಸರ್ಕಾರದ ವತಿಯಿಂದ ರಾಜ್ಯದ ಪಾಲಿನ ಹೆಚ್ಚುವರಿ ಪೂರಕ ಸಹಾಯಧನವನ್ನು ಸೇರಿಸಿ ತುಂತುರು ನೀರಾವರಿ ಘಟಕಗಳಿಗೆ ಎಲ್ಲಾ ವರ್ಗದ ರೈತರಿಗೆ 2 ಹೆ ವರೆಗೆ ಶೇ.90 ರಷ್ಟು ಹಾಗೂ ಹನಿ ನೀರಾವರಿ ಘಟಕಗಳಿಗೆ ಸಣ್ಣ /ಅತೀ ಸಣ್ಣ/ಪ.ಜಾತಿ/ಪ.ಪಂಗಡದ ರೈತರಿಗೆ 2 ಹೆ ವರೆಗೆ ಶೇ.90 ರಷ್ಟು ಮತ್ತು ಇನ್ನುಳಿದಂತೆ 5 ಹೆ ಪ್ರದೇಶದವರೆಗೆ ಶೇ.45 ರಷ್ಟು ಸಹಾಯಧನ ಒದಗಿಸಿ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

12. **ಆಹಾರ ಮತ್ತು ಪೌಷ್ಠಿಕ ಭದ್ರತೆ (Food and Nutrition Security-FNS)**: ಈ ಯೋಜನೆಯಡಿ ಭತ್ತ, ದ್ವಿದಳಧಾನ್ಯ, TRFA-ದ್ವಿದಳಧಾನ್ಯ, ಒರಟುಧಾನ್ಯ, ನ್ಯೂಟ್ರಿಸಿರಿಧಾನ್ಯ, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಭತ್ತ, ದ್ವಿದಳಧಾನ್ಯ, ನ್ಯೂಟ್ರಿಸಿರಿಧಾನ್ಯ ಮತ್ತು ಒರಟುಧಾನ್ಯ ಉತ್ಪಾದನೆಗೆ ಬಿತ್ತನೆ ಬೀಜ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ

ಮೂಲಕ ಪ್ರಸರಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ(ATMA)ಯನ್ನು ಅಸ್ತಿತ್ವಕ್ಕೆ ತರಲಾಗಿದೆ. ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅಧಿಕಾರಿ/ ರೈತರ ತರಬೇತಿ, ಪರಿಚಯ ಪ್ರವಾಸ, ಪ್ರಾತ್ಯಕ್ಷಿಕೆ, ರೈತರ ಗುಂಪು ರಚನೆ, ಕೃಷಿ ಪಾಠಶಾಲೆ, ಕೃಷಿ ಮೇಳ, ಕ್ಷೇತ್ರೋತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತದೆ. ಯೋಜನೆಯಡಿ ಆಯೋಜಿಸುವ ವಿಸ್ತರಣಾ ಕಾರ್ಯಕ್ರಮಗಳಲ್ಲಿ ಎಲ್ಲಾ ವರ್ಗದ ರೈತರು / ರೈತ ಮಹಿಳೆಯರ ಪಾಲ್ಗೊಳ್ಳುವಿಕೆ ಅವಕಾಶವಿರುತ್ತದೆ.

17. **ಮಣ್ಣು ಆರೋಗ್ಯ ಮತ್ತು ಫಲವತ್ತತೆ ಯೋಜನೆ (Soil Health & Fertility-SHF):** ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಆಧಾರದ ಮೇಲೆ ರಸಗೊಬ್ಬರಗಳ ಬಳಕೆ ಮಾಡುವ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಮಣ್ಣು ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಮಣ್ಣು ಆರೋಗ್ಯ ಚೀಟಿಗಳ ವಿತರಣೆ ಮಾಡಲಾಗುವುದು. ಇಲಾಖೆಯ ಮೂರು ಮಣ್ಣು ಪರೀಕ್ಷಾ ಪ್ರಯೋಗಾಲಯ ಪ್ರಯೋಗಾಲಯಗಳ ಬಲವರ್ಧನೆ. ಇಲಾಖೆಯ 7 ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಗಳ NABL ಅಕ್ರಿಡಿಟೇಷನ್ ಮತ್ತು 30 ಮಣ್ಣು ಪರೀಕ್ಷಾ ಪ್ರಯೋಗಾಲಯಗಳ NABL recognition ಕ್ರಮ ಕೈಗೊಳ್ಳಲಾಗುವುದು. ಇದಲ್ಲದೆ, ಜಲಾನಯನ ಅಭಿವೃದ್ಧಿ ಇಲಾಖೆವತಿಯಿಂದ ಉಪಮೇಲ್ಮೈ ಕಾಲುವೆಗಳ ನಿರ್ಮಾಣದಿಂದ ಸಮಸ್ಯಾತ್ಮಕ ಮಣ್ಣುಗಳ ಪುನಃಶ್ಚೇತನ ಮಾಡಲಾಗುವುದು.

18. **ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME):** ವ್ಯಕ್ತಿಗತ ಕಿರು ಉದ್ದಿಮೆಗಳಿಗೆ ಬೆಂಬಲ, ರೈತ ಉತ್ಪಾದಕರ ಸಂಸ್ಥೆಗಳು/ ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ, ಸ್ವಸಹಾಯ ಸಂಘಗಳ ಸದಸ್ಯರಿಗೆ ಕಾರ್ಯ ನಿರ್ವಹಣಾ ಬಂಡವಾಳ ಹಾಗೂ ಪರಿಕರಗಳ ಖರೀದಿಗೆ ಪ್ರಾಥಮಿಕ ಬಂಡವಾಳ, ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ, ರಾಜ್ಯದ ತಾಂತ್ರಿಕ ಸಂಸ್ಥೆಗಳಲ್ಲಿ ಆಹಾರ ಸಂಸ್ಕರಣಾ ಉದ್ಯಮಿಗಳಿಗೆ ತರಬೇತಿ ನೀಡಲು ಹಾಗೂ ಪ್ರಾಯೋಗಿಕ ಉತ್ಪಾದನೆ ಕೈಗೊಳ್ಳಲು ಇನ್ ಕ್ಯುಬೇಷನ್ ಕೇಂದ್ರಗಳ ಸ್ಥಾಪನೆಗೆ ಅನುದಾನವನ್ನು ನೀಡಲಾಗುವುದು. KAPPEC ಸಂಸ್ಥೆಯು ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಇಲಾಖೆಯಾಗಿರುತ್ತದೆ.

ಅಸಂಘಟಿತ ವಲಯದಲ್ಲಿರುವ ಸೂಕ್ಷ್ಮ/ ಕಿರು ಆಹಾರ ಸಂಸ್ಕರಣ ಉದ್ದಿಮೆಗಳನ್ನು ಪ್ರೋತ್ಸಾಹಿಸಿ ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ಸಂಘಟಿತ ವಲಯಕ್ಕೆ ತರುವುದು ಹಾಗೂ ರೈತ ಉತ್ಪಾದಕ ಸಂಸ್ಥೆಗಳು, ಸ್ವಸಹಾಯ ಸಂಘಗಳು ಹಾಗೂ ಉತ್ಪಾದಕ ಸಹಕಾರಿ ಸಂಘಗಳಿಗೆ ಅವುಗಳ ಸರಪಳಿಕೊಂಡಿಯೊಂದಿಗೆ ಉತ್ತೇಜನ ನೀಡಲಾಗುತ್ತಿದೆ. ಯೋಜನೆಯ ಅನುಷ್ಠಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು 60:40ರ ಅನುಪಾತದಲ್ಲಿ ಇದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರವು ಶೇ.35ರಷ್ಟು ಹಾಗೂ ರಾಜ್ಯ ಸರ್ಕಾರವು PMFME ಯೋಜನೆಯಡಿಯಲ್ಲಿ ಶೇ.15 ರಷ್ಟು ಹೆಚ್ಚುವರಿ ಸಹಾಯಧನವನ್ನು ನೀಡಲಾಗುತ್ತಿದೆ.

19. **ಕರ್ನಾಟಕ ರೈತ ಸಮೃದ್ಧಿ ಯೋಜನೆ:** ಕೃಷಿ ಕ್ಷೇತ್ರವನ್ನು ಸುಸ್ಥಿರ ಹಾಗೂ ಲಾಭದಾಯಕವಾಗಿಸಲು ರಾಜ್ಯದಲ್ಲಿ ಪ್ರಸ್ತುತ ಕೃಷಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕೃಷಿ ಭಾಗ್ಯ ಯೋಜನೆಯ ಫಲಾನುಭವಿಗಳನ್ನು ಕೇಂದ್ರ ಬಿಂದುವಾಗಿರಿಸಿಕೊಂಡು ವಿವಿಧ ರೈತಪರ ಯೋಜನೆಗಳನ್ನು ಸಂಯೋಜಿಸುವ ಮೂಲಕ, ರೈತ ಮತ್ತು ರೈತ ಗುಂಪುಗಳಿಗೆ ಗುಣಮಟ್ಟದ ಉತ್ಪಾದನೆ, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ರಫ್ತು ಮಾಡುವುದರ ಬಗ್ಗೆ ಸಾಮರ್ಥ್ಯ ಅಭಿವೃದ್ಧಿ ಹಾಗೂ ಅರಿವು ಮೂಡಿಸುವುದು. ರೈತರಿಗೆ ಮಣ್ಣು ಪರೀಕ್ಷೆಯ ಆಧಾರದ ಮೇಲೆ ಯಾವ ಬೆಳೆ ಬೆಳೆಯಬೇಕೆಂಬ ಕುರಿತು ಹಾಗೂ ಮಾರುಕಟ್ಟೆ ಬೇಡಿಕೆಯನ್ನು ಆಧರಿಸಿ ಮಾರ್ಗದರ್ಶನ ನೀಡುವುದು

**LCQ-536(617)(13.11.2024)**

ಇತ್ಯಾದಿಗಳ ಮೂಲಕ ಆಹಾರ ಉತ್ಪಾದನೆ ಹಾಗೂ ರೈತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸಮಗ್ರ ಕೃಷಿ ಪದ್ಧತಿ ಘಟಕದಡಿ ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನ ಹಾಗೂ ಪ.ಜಾ/ಪ.ಪಂ ವರ್ಗದ ರೈತರಿಗೆ ಶೇ.90ರ ಸಹಾಯಧನ ನೀಡಲಾಗುತ್ತದೆ.

ಜಂಟಿ ಕೃಷಿ ನಿರ್ದೇಶಕರು
(ಬೆಳೆ ಅಭಿವೃದ್ಧಿ)

**ಅನುಬಂಧ-2 (ಎಲ್.ಸಿ.ಕ್ಯೂ-617)**

**ಉತ್ತರಿಸಬೇಕಾದ ದಿನಾಂಕ: 13.12.2024**

**2023-24ನೇ ಸಾಲಿನ ಮಲೆನಾಡು ಭಾಗದ ಜಿಲ್ಲೆಗಳ ತಾಲ್ಲೂಕುವಾರು, ಬೆಳೆವಾರು ಕೃಷಿ ಬೆಳೆಗಳ ಬಿತ್ತನೆ ವಿವರ (ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ)**

| ಕ್ರ.ಸಂ. | ಜಿಲ್ಲೆಗಳು | ಕ್ರ.ಸಂ. | ತಾಲ್ಲೂಕುಗಳು | ಅವರೆ | ಸಜ್ಜೆ | ತೃಣಧಾನ್ಯಗಳು | ಬಾರ್ಲಿ | ಹುರಳು | ಹತ್ತಿ | ಅಲಸಂದೆ | ಕಡಲೆ |
|---|---|---|---|---|---|---|---|---|---|---|---|
| 1 | ಚಿಕ್ಕಮಗಳೂರು | 1 | ಅಜ್ಜಂಪುರ | 18.03 | 0.04 | 5.31 | 2.93 | 0.04 | 2.01 | 2.46 | 3190.14 |
| | | 2 | ಚಿಕ್ಕಮಗಳೂರು | 959.82 | 0 | 39.58 | 3.25 | 0.91 | 1202.19 | 383.49 | 84.97 |
| | | 3 | ಕಡೂರು | 273.23 | 11.77 | 839.64 | 0.01 | 5.5 | 723.59 | 106.08 | 1760.63 |
| | | 4 | ಕಳಸ | 0 | 0 | 0 | 0 | 0 | 0 | 0 | 0 |
| | | 5 | ಕೊಪ್ಪ | 0 | 0 | 0 | 0 | 0 | 0 | 0.95 | 0 |
| | | 6 | ಮೂಡಿಗೆರೆ | 0 | 0 | 0 | 0 | 0 | 0 | 0 | 0 |
| | | 7 | ನರಸಿಂಹರಾಜಪುರ | 0 | 0 | 0 | 0 | 0 | 0 | 0 | 0 |
| | | 8 | ಶೃಂಗೇರಿ | 67.55 | 0 | 0 | 0 | 0 | 0 | 0 | 34.79 |
| | | 9 | ತರೀಕೆರೆ | 646.62 | 10.35 | 8.49 | 3.76 | 1.8 | 71.4 | 58.36 | 5058.29 |
| | | | **ಒಟ್ಟು** | **787.67** | **1.46** | **876.44** | **5.07** | **4.65** | **1911.75** | **434.62** | **12.24** |
| 2 | ಹಾಸನ | 1 | ಆಲೂರು | 17.24 | 0 | 0 | 1.88 | 0 | 0 | 19.55 | 0 |
| | | 2 | ಅರಕಲಗೂಡು | 194.18 | 0 | 0.35 | 2.01 | 15.63 | 1.58 | 1011.18 | 62.26 |
| | | 3 | ಅರಸೀಕೆರೆ | 363.29 | 4.14 | 80.79 | 0.28 | 31.77 | 146.94 | 4453.85 | 4.58 |
| | | 4 | ಬೇಲೂರು | 311.63 | 0.68 | 4.7 | 7.49 | 0 | 506.55 | 219.46 | 40.73 |
| | | 5 | ಚನ್ನರಾಯಪಟ್ಟಣ | 161.99 | 1.6 | 1.67 | 5.47 | 0.69 | 0.1 | 9925.25 | 2.31 |
| | | 6 | ಹಾಸನ | 51.29 | 0.25 | 6.52 | 33.37 | 0.43 | 4.55 | 56.23 | 0.73 |
| | | 7 | ಹೊಳೆನರಸೀಪುರ | 553.5 | 4.06 | 7.32 | 2.94 | 16.19 | 1.69 | 1493.44 | 103.71 |
| | | 8 | ಸಕಲೇಶಪುರ | 0 | 0.25 | 1.36 | 0 | 0 | 0.4 | 1.26 | 0 |
| | | | **ಒಟ್ಟು** | **585.8** | **3.94** | **86.01** | **48.38** | **32.33** | **658.65** | **16591.82** | **6.9** |
| 3 | ಕೊಡಗು | 1 | ಕುಶಾಲನಗರ | 0 | 0 | 0 | 0 | 0 | 0 | 0 | 0 |
| | | 2 | ಮಡಿಕೇರಿ | 0 | 0 | 0 | 0 | 0 | 0 | 0 | 0 |
| | | 3 | ಪೊನ್ನಂಪೇಟೆ | 0 | 0 | 0 | 0 | 0 | 0 | 0 | 0 |
| | | 4 | ಸೋಮವಾರಪೇಟೆ | 0 | 0 | 0 | 0 | 0 | 0 | 0 | 0 |
| | | 5 | ವಿರಾಜಪೇಟೆ | 0 | 0 | 0 | 0 | 0 | 0 | 0 | 0 |
| | | | **ಒಟ್ಟು** | **1.96** | **0.38** | **0** | **0** | **0** | **0.6** | **19.52** | **1.01** |
| 4 | ಶಿವಮೊಗ್ಗ | 1 | ಭದ್ರಾವತಿ | 2.2 | 0 | 0 | 0 | 0 | 4.43 | 3.26 | 0 |
| | | 2 | ಹೊಸನಗರ | 0 | 0.15 | 0 | 0 | 0 | 1.16 | 3.95 | 0.2 |
| | | 3 | ಸಾಗರ | 0.21 | 0 | 0.16 | 0 | 0 | 0 | 1.36 | 0 |
| | | 4 | ಶಿಕಾರಿಪುರ | 3.69 | 0.51 | 0 | 16.29 | 0 | 20 | 10.68 | 0.61 |
| | | 5 | ಶಿವಮೊಗ್ಗ | 3 | 0.53 | 0 | 0 | 0 | 11.1 | 27.76 | 0.6 |
| | | 6 | ಸೊರಬ | 1.78 | 0 | 0 | 0 | 0 | 25.79 | 0.04 | 0 |
| | | 7 | ತೀರ್ಥಹಳ್ಳಿ | 0 | 0 | 0 | 0 | 0 | 0 | 0 | 0 |
| | | | **ಒಟ್ಟು** | **8.92** | **0.51** | **0.16** | **16.29** | **0** | **61.88** | **13.51** | **0** |

ಮೂಲ: ಬೆಳೆ ಸಮೀಕ್ಷೆಯ ವರದಿಯಂತೆ

ಜಂಟಿ ಕೃಷಿ ನಿರ್ದೇಶಕರು
(ಯೋಜನೆ)

**ಅನುಬಂಧ-2 (ಎಲ್.ಸಿ.ಕ್ಯೂ-617)**

**ಉತ್ತರಿಸಬೇಕಾದ ದಿನಾಂಕ: 13.12.2024**

**2023-24ನೇ ಸಾಲಿನ ಮಲೆನಾಡು ಭಾಗದ ಜಿಲ್ಲೆಗಳ ತಾಲ್ಲೂಕುವಾರು, ಬೆಳೆವಾರು ಕೃಷಿ ಬೆಳೆಗಳ ಬಿತ್ತನೆ ವಿವರ (ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ)**

| ಕ್ರ.ಸಂ. | ಜಿಲ್ಲೆಗಳು | ಕ್ರ.ಸಂ. | ತಾಲ್ಲೂಕುಗಳು | ಹೆಸರು | ಶೇಂಗಾ | ಹುರುಳಿ | ಜೋಳ | ಅಗಸೆ | ಮಡಕಿ | ಮು.ಜೋಳ | ಮಸೂರ | ಹೆಸರು | ಹುಚ್ಚೆಳ್ಳು |
|---|---|---|---|---|---|---|---|---|---|---|---|---|---|
| 1 | ಚಿಕ್ಕಮಗಳೂರು | 1 | ಅಜ್ಜಂಪುರ | 0 | 130.73 | 11.7 | 1355.29 | 0 | 0 | 1060.96 | 0.3 | 0.61 | 0 |
| | | 2 | ಚಿಕ್ಕಮಗಳೂರು | 0.67 | 157.58 | 64.01 | 1314.65 | 0 | 5.37 | 3301.02 | 3.78 | 35.66 | 0.4 |
| | | 3 | ಕಡೂರು | 73.23 | 1253.12 | 428.4 | 2570.11 | 1.21 | 0 | 1782.4 | 0 | 2788.93 | 0 |
| | | 4 | ಕಳಸ | 0 | 0 | 0 | 0 | 0 | 0 | 0 | 0 | 0 | 0 |
| | | 5 | ಕೊಪ್ಪ | 0 | 0 | 0 | 2.65 | 0 | 0 | 0 | 0 | 0 | 0 |
| | | 6 | ಮೂಡಿಗೆರೆ | 3.52 | 0 | 0 | 0 | 0 | 0 | 0 | 3.33 | 0 | 0 |
| | | 7 | ನರಸಿಂಹರಾಜಪುರ | 0 | 0 | 0 | 0 | 0 | 0 | 0.4 | 0.81 | 0 | 0 |
| | | 8 | ಶೃಂಗೇರಿ | 0 | 0 | 1.62 | 475.59 | 0 | 0 | 17.22 | 2.03 | 0 | 0 |
| | | 9 | ತರೀಕೆರೆ | 0.22 | 14.98 | 367.18 | 4262.32 | 0 | 2.31 | 1449.45 | 0.9 | 2.64 | 0 |
| | | | **ಒಟ್ಟು** | **77.4** | **1531.09** | **148.81** | **1477.75** | **1.21** | **3.92** | **6267.35** | **11.15** | **2823.36** | **0.4** |
| 2 | ಹಾಸನ | 1 | ಆಲೂರು | 36.56 | 0 | 4.83 | 0.34 | 0 | 0 | 15205.31 | 0 | 0 | 0 |
| | | 2 | ಅರಕಲಗೂಡು | 7.89 | 30.48 | 80.94 | 150.33 | 0 | 0.24 | 23364.45 | 0 | 56.46 | 0 |
| | | 3 | ಅರಸೀಕೆರೆ | 79.61 | 15.94 | 238.03 | 141.72 | 0 | 3.8 | 8876.76 | 0 | 6218.08 | 0.04 |
| | | 4 | ಬೇಲೂರು | 11.43 | 6.65 | 432.09 | 1529.11 | 0 | 0.83 | 18013.07 | 2.11 | 5.47 | 0 |
| | | 5 | ಚನ್ನರಾಯಪಟ್ಟಣ | 1.71 | 32.41 | 259.17 | 1881.4 | 0 | 0 | 8861.32 | 0 | 827.2 | 0 |
| | | 6 | ಹಾಸನ | 18.64 | 27.54 | 185.49 | 856.41 | 0 | 0.95 | 41255.89 | 0.6 | 6.4 | 0 |
| | | 7 | ಹೊಳೆನರಸೀಪುರ | 40.87 | 8 | 770.35 | 1902.34 | 0 | 1 | 17995.08 | 1 | 57.29 | 0.92 |
| | | 8 | ಸಕಲೇಶಪುರ | 11.5 | 29.84 | 18.78 | 32.14 | 0 | 0 | 388.28 | 1.28 | 0 | 0 |
| | | | **ಒಟ್ಟು** | **113.75** | **86.62** | **608.04** | **4385.69** | **0** | **4.82** | **113705.32** | **4.99** | **7161.48** | **0.96** |
| 3 | ಕೊಡಗು | 1 | ಕುಶಾಲನಗರ | 0 | 0 | 0 | 364.17 | 0 | 0 | 1477.65 | 0 | 0 | 0 |
| | | 2 | ಮಡೀಕೆರಿ | 0 | 0 | 0 | 0 | 0 | 0 | 0 | 0 | 0 | 0 |
| | | 3 | ಪೊನ್ನಂಪೇಟೆ | 0 | 0 | 0 | 0 | 0 | 0 | 0 | 0 | 0 | 0 |
| | | 4 | ಸೋಮವಾರಪೇಟೆ | 0 | 0 | 0 | 162 | 0 | 0 | 486.4 | 0 | 0 | 0 |
| | | 5 | ವಿರಾಜಪೇಟೆ | 0 | 0 | 0 | 0 | 0 | 0 | 0 | 1.76 | 0 | 0 |
| | | | **ಒಟ್ಟು** | **0.4** | **3.73** | **179.1** | **801.81** | **0** | **0** | **2660.84** | **1.76** | **54.77** | **0** |
| 4 | ಶಿವಮೊಗ್ಗ | 1 | ಭದ್ರಾವತಿ | 0 | 0.81 | 6.01 | 2.67 | 0 | 0.82 | 686.64 | 0 | 0 | 0 |
| | | 2 | ಹೊಸನಗರ | 2.12 | 0.63 | 0.9 | 34.84 | 0 | 0 | 1501.51 | 0 | 6.02 | 0 |
| | | 3 | ಸಾಗರ | 4.83 | 2.81 | 2.21 | 0 | 0 | 0.56 | 1660.3 | 2.43 | 0.23 | 0.82 |
| | | 4 | ಶಿಕಾರಿಪುರ | 0.9 | 9.27 | 181.93 | 287.29 | 0 | 4.89 | 22577.64 | 0 | 71.78 | 0 |
| | | 5 | ಶಿವಮೊಗ್ಗ | 0.5 | 10.76 | 8.47 | 19.98 | 0 | 0 | 14531.45 | 0 | 24.2 | 0 |
| | | 6 | ಸೊರಬ | 8.84 | 14.82 | 6.29 | 0 | 0 | 0 | 9063.72 | 0 | 1.87 | 0 |
| | | 7 | ತೀರ್ಥಹಳ್ಳಿ | 0 | 0 | 0 | 0 | 0 | 0 | 0 | 0 | 0 | 0 |
| | | | **ಒಟ್ಟು** | **16.77** | **23.43** | **23.37** | **34.86** | **0** | **6.27** | **43648.73** | **2.43** | **4.77** | **0.82** |

ಮೂಲ: ಬೆಳೆ ಸಮೀಕ್ಷೆಯ ವರದಿಯಂತೆ

ಜಂಟಿ ಕೃಷಿ ನಿರ್ದೇಶಕರು
(ಯೋಜನೆ)

**ಅನುಬಂಧ-2 (ಎಲ್.ಸಿ.ಕ್ಯೂ-617)**

**ಉತ್ತರಿಸಬೇಕಾದ ದಿನಾಂಕ: 13.12.2024**

**2023-24ನೇ ಸಾಲಿನ ಮಲೆನಾಡು ಭಾಗದ ಜಿಲ್ಲೆಗಳ ತಾಲ್ಲೂಕುವಾರು, ಬೆಳೆವಾರು ಕೃಷಿ ಬೆಳೆಗಳ ಬಿತ್ತನೆ ವಿವರ (ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ)**

| ಕ್ರ.ಸಂ. | ಜಿಲ್ಲೆಗಳು | ಕ್ರ.ಸಂ. | ತಾಲ್ಲೂಕುಗಳು | ಭತ್ತ | ರಾಗಿ | ಸಾಸಿವೆ | ಕುಸುಬೆ | ಎಳ್ಳು | ಸೋಯಾಅವರೆ | ಕಬ್ಬು | ಸೂರ್ಯಕಾಂತಿ | ತೊಗರಿ | ಉದ್ದು | ಗೋಧಿ | ಒಟ್ಟು |
|---|---|---|---|---|---|---|---|---|---|---|---|---|---|---|---|
| 1 | ಚಿಕ್ಕಮಗಳೂರು | 1 | ಅಜ್ಜಂಪುರ | 4.19 | 10285.23 | 0 | 0.54 | 0 | 0.05 | 6.2 | 0 | 1.47 | 0.56 | 0.22 | 16079.01 |
| | | 2 | ಚಿಕ್ಕಮಗಳೂರು | 1407.73 | 2913.62 | 0 | 0.72 | 80.61 | 0.4 | 117.88 | 47.72 | 99.24 | 0 | 0.76 | 12226.03 |
| | | 3 | ಕಡೂರು | 2.18 | 42806.32 | 0 | 0.8 | 140.83 | 2.08 | 9.64 | 297.16 | 45.79 | 2.64 | 0.29 | 55925.58 |
| | | 4 | ಕಳಸ | 289.22 | 0 | 0 | 0 | 0 | 0 | 0 | 0 | 0 | 0 | 0 | 289.22 |
| | | 5 | ಕೊಪ್ಪ | 1960.28 | 0 | 0 | 0 | 0 | 0 | 0.03 | 0 | 0.92 | 0 | 0 | 1964.83 |
| | | 6 | ಮೂಡಿಗೆರೆ | 1406.42 | 0 | 0 | 0 | 0 | 0 | 0 | 0 | 0 | 0 | 0 | 1413.27 |
| | | 7 | ನರಸಿಂಹರಾಜಪುರ | 1867.36 | 2.02 | 0 | 0 | 0 | 0 | 0 | 0 | 0 | 0 | 0 | 1870.59 |
| | | 8 | ಶೃಂಗೇರಿ | 1421.67 | 13.09 | 0 | 0 | 0 | 0 | 0.2 | 0 | 0 | 0 | 0 | 2033.76 |
| | | 9 | ತರೀಕೆರೆ | 802.78 | 3038.63 | 0 | 0.54 | 0 | 12.93 | 4.98 | 3.13 | 0 | 0.48 | 0 | 15822.54 |
| | | | **ಒಟ್ಟು** | **8685.34** | **55450.79** | **0** | **1.52** | **221.44** | **15.46** | **136.19** | **341.75** | **147.42** | **2.72** | **1.27** | **81380.2** |
| 2 | ಹಾಸನ | 1 | ಆಲೂರು | 3120.29 | 4686.28 | 0 | 0 | 0 | 0 | 0.21 | 0 | 0.08 | 0 | 0 | 23092.57 |
| | | 2 | ಅರಕಲಗೂಡು | 7569.22 | 7718.2 | 0 | 0 | 6.85 | 0 | 4.27 | 0 | 44.77 | 5.54 | 0 | 40326.83 |
| | | 3 | ಅರಸೀಕೆರೆ | 0.74 | 43096.7 | 0.34 | 0.81 | 827.21 | 3.14 | 9.03 | 41.57 | 126.75 | 305.32 | 0 | 65071.23 |
| | | 4 | ಬೇಲೂರು | 2541.04 | 7449.33 | 0 | 0.83 | 4.22 | 2.6 | 244.65 | 84.41 | 14.71 | 1.86 | 0.46 | 31436.11 |
| | | 5 | ಚನ್ನರಾಯಪಟ್ಟಣ | 409.21 | 30195.4 | 0 | 0 | 198.5 | 0 | 1002.18 | 0 | 40.65 | 3.85 | 0 | 53812.08 |
| | | 6 | ಹಾಸನ | 1809.13 | 7606.75 | 0.21 | 0.08 | 0 | 8.68 | 264.44 | 0 | 8.51 | 0.38 | 10.35 | 52213.82 |
| | | 7 | ಹೊಳೆನರಸೀಪುರ | 3177.12 | 21842.38 | 0 | 0.08 | 88.36 | 1.85 | 1422.85 | 0 | 20.76 | 13.73 | 0.25 | 49527.08 |
| | | 8 | ಸಕಲೇಶಪುರ | 3974.95 | 197.55 | 0.21 | 0.04 | 0 | 0 | 154.58 | 0 | 1.01 | 0 | 0 | 4813.43 |
| | | | **ಒಟ್ಟು** | **21686.73** | **99385.73** | **0.34** | **1.68** | **1125.14** | **13.91** | **2275.45** | **125.98** | **255.22** | **329.98** | **11.06** | **269297** |
| 3 | ಕೊಡಗು | 1 | ಕುಶಾಲನಗರ | 1425.41 | 23.07 | 0 | 0 | 0 | 0 | 0 | 0 | 0 | 0 | 0 | 3290.3 |
| | | 2 | ಮಡೀಕೇರಿ | 2093.16 | 0 | 0 | 0 | 0 | 0 | 0 | 0 | 0 | 0 | 0 | 2093.16 |
| | | 3 | ಪೊನ್ನಂಪೇಟೆ | 4829.71 | 0 | 0 | 0 | 0 | 0 | 0 | 0 | 0 | 0 | 0 | 4829.71 |
| | | 4 | ಸೋಮವಾರಪೇಟೆ | 2690.16 | 0 | 0 | 0 | 0 | 0 | 0 | 0 | 0 | 0 | 0 | 3338.56 |
| | | 5 | ವಿರಾಜಪೇಟೆ | 2276.76 | 0 | 0 | 0 | 0 | 0 | 0 | 0 | 0 | 0 | 0 | 2278.52 |
| | | | **ಒಟ್ಟು** | **15431.4** | **46.38** | **0** | **0** | **0** | **4.28** | **153.59** | **354.71** | **2.17** | **0.66** | **0** | **19719.1** |
| 4 | ಶಿವಮೊಗ್ಗ | 1 | ಭದ್ರಾವತಿ | 4028.79 | 50.43 | 0 | 0 | 0 | 0.55 | 204.4 | 0 | 2.58 | 0 | 0 | 4993.59 |
| | | 2 | ಹೊಸನಗರ | 7780.23 | 2.24 | 0 | 0 | 0.34 | 0 | 131.95 | 7.27 | 0 | 0.81 | 0 | 9474.32 |
| | | 3 | ಸಾಗರ | 12209.04 | 7.41 | 0 | 0 | 0 | 0 | 59.45 | 0 | 0 | 0.18 | 0 | 13952 |
| | | 4 | ಶಿಕಾರಿಪುರ | 10670.17 | 2.93 | 0 | 0 | 0.09 | 8.82 | 11.84 | 355.51 | 20.26 | 4.81 | 0 | 34259.91 |
| | | 5 | ಶಿವಮೊಗ್ಗ | 9838.18 | 175.77 | 0 | 0 | 0.34 | 3.03 | 198.48 | 7.27 | 7.84 | 3.8 | 0 | 24873.06 |
| | | 6 | ಸೊರಬ | 19187.16 | 0.91 | 0 | 0 | 1.57 | 2.64 | 70.51 | 0 | 0.57 | 0.07 | 0 | 28386.58 |
| | | 7 | ತೀರ್ಥಹಳ್ಳಿ | 7526.29 | 0 | 0 | 0 | 0 | 0 | 2.21 | 0 | 0 | 0 | 0 | 7528.5 |
| | | | **ಒಟ್ಟು** | **65061.2** | **202.14** | **0** | **0** | **1.66** | **5.1** | **521.05** | **0.8** | **29.08** | **1.41** | **0** | **109685** |

ಮೂಲ: ಬೆಳೆ ಸಮೀಕ್ಷೆಯ ವರದಿಯಂತೆ

ಜಂಟಿ ಕೃಷಿ ನಿರ್ದೇಶಕರು
(ಯೋಜನೆ)